**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ,**
**ಪೀಠಾಸೀನ ಕೊಳ್ಳೇಗಾಲ**

**ಎಸ್.ಸಿ. 5006/2026**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಸಿ. ಮಂಜುನಾಥ ಪ್ರಸಾದ್ | **ಪ್ರಮಾಣ ವಚನ ಭೋಧಿಸಿದ ದಿನಾಂಕ** |
| **ತಂದೆ ಹೆಸರು** | : | ಲೇಟ್ ಹೆಚ್ ಚಿಕ್ಕಯ್ಯ | **27.07.2026** |
| **ವಯಸ್ಸು** | : | 56 ವರ್ಷ | |
| **ವೃತ್ತಿ** | : | ಪಿ.ಎಸ್.ಐ, ರಾಮಾಪುರ ಪೊ.ಠಾಣೆ | **ಪ್ರಾ.ಸಾಃ 07** |
| **ವಾಸ ಸ್ಥಳ** | : | ರಾಮಾಪುರ | **ಚಾ.ಸಾಃ 13** |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

**ನಾನು ದಿಃ** 01.08.2023 **ರಿಂದ ದಿಃ** 23.02.2025 **ರವರೆಗೆ ಪಿ.ಎಸ್.ಐ ಆಗಿ ಹನೂರು ಪೊ.ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.**

ದಿಃ 30.09.2025 ರಂದು ರಾತ್ರಿ 8.00 ಗಂಟೆ ಸಮಯದಲ್ಲಿ ನಾನು ಠಾಣಾ ಕರ್ತವ್ಯದಲ್ಲಿದ್ದಾಗ ಚಾಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ಪಿರ್ಯಾದಿಯನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಖ್ಯೆ 199/2025 ರಲ್ಲಿ ಪ್ರಕರಣವನ್ನು ನೊಂದಾಯಿಸಿರುತ್ತೇನೆ. ಪಿರ್ಯಾದಿಯನ್ನು ನಿಪಿ 1 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿ ಸಹಿಯನ್ನು ನಿಪಿ 1(ಬಿ) ಎಂದು ಗುರುತಿಸಲಾಯಿತು. ಪ್ರ.ವರದಿಯನ್ನು ನಿಪಿ 12 ಎಂದು ಸಾಕ್ಷಿ ಸಹಿಯನ್ನು ನಿಪಿ 12(ಎ) ಎಂದು

ಗುರುತಿಸಲಾಯಿತು. ಅದೇ ದಿನ ಮಹಿಳಾ ಸಿಬ್ಬಂದಿಯೊಂದಿಗೆ ಚಾಸಾ 1 ರವರನ್ನು ವೈದ್ಯಕೀಯ ಪರೀಕ್ಷೆಗೆಂದು ಕಳುಹಿಸಿರುತ್ತೇನೆ.

ದಿಃ 01.10.2025 ರಂದು ಕೃತ್ಯ ನಡೆದ ಸ್ಥಳಕ್ಕೆ ಬೇಟಿ ಚಾಸಾ 5 ಮತ್ತು 6 ರವರ ಸಮಕ್ಷಮ ಚಾಸಾ 1 ತೋರಿಸಿದ ಸ್ಥಳದಲ್ಲಿ ಸಂಜೆ 5.45 ರಿಂದ 6.30 ರ ಸಮಯದಲ್ಲಿ ಮಹಜರ್ ಕ್ರಮ ಜರುಗಿಸಿ ಆ ಸಮಯದಲ್ಲಿ ಚಾಸಾ 1 ಹಾಜರುಪಡಿಸಿದ ಒಂದು ರವಿಕೆಯನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಮಹಜರ್ ಅನ್ನು ನಿಪಿ 2 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿ ಸಹಿಯನ್ನು ನಿಪಿ 2(ಸಿ) ಎಂದು ಗುರುತಿಸಲಾಯಿತು. ರವಿಕೆಯನ್ನು ಮು.ಮಾ 1 ಎಂದು ಈಗಾಗಲೇ ಗುರುತಿಸಲಾಗಿದೆ. ಮಹಜರ ಸಮಯದಲ್ಲಿ ಭಾವಚಿತ್ರಗಳನ್ನು ತೆಗೆಸಿರುತ್ತೇನೆ. ಭಾವಚಿತ್ರಗಳನ್ನು ನಿಪಿ 3 ಮತ್ತು 4 ಎಂದು ಈಗಾಗಲೇ ಗುರುತಿಸಲಾಗಿದೆ. ನಂತರ ಮು.ಮಾ 1 ರ ಸಂಬಂಧ ನ್ಯಾಯಾಲಯಕ್ಕೆ ಮಾಲುಪಟ್ಟಿಯನ್ನು ಸಲ್ಲಿಸಿರುತ್ತೇನೆ. ಚಾಸಾ 5 ಮತ್ತು 6 ರವರಿಗೆ ನೋಟಿಸ್ ನೀಡಿ ಮಹಜರ್ ಸ್ಥಳಕ್ಕೆ ಕರೆಸಿರುತ್ತೇನೆ. ನೋಟಿಸ್ ಅನ್ನು ನಿಪಿ 13 ಎಂದು ಸಾಕ್ಷಿ ಸಹಿಯನ್ನು ನಿಪಿ 13(ಎ) ಎಂದು ಗುರುತಿಸಲಾಯಿತು.

ದಿಃ 03.10.2025 ರಂದು ದಿಃ 28.09.2025 ರ ರಾತ್ರಿ ಬಂಡಳ್ಳಿ ಗ್ರಾಮದಲ್ಲಿ ವಿದ್ಯುತ್ ಸರಬರಾಜು ಇದ್ದ ಬಗ್ಗೆ ಮಾಹಿತಿಯನ್ನು ನೀಡುವಂತೆ ಚಾಸಾ 8 ರವರಿಗೆ ಮನವಿ ಮಾಡಿರುತ್ತೇನೆ.

ದಿಃ 16.10.2025 ರಂದು ಆರೋಪಿಯು ಠಾಣೆಗೆ ಹಾಜರಾಗಿದ್ದು ಆತನನ್ನು ವಿಚಾರಣೆ ಮಾಡಿರುತ್ತೇನೆ.

ದಿಃ 17.10.2025 ರಂದು ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿರುತ್ತೇನೆ. ಚಾಸಾ 9 ರವರು ನೀಡಿದ ವರದಿಯನ್ನು ನಿಪಿ 08 ಎಂದು

ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿ ಸಹಿಯನ್ನು ನಿಪಿ 08(ಎ) ಎಂದು ಗುರುತಿಸಲಾಯಿತು.

ದಿಃ 25.10.2025 ರಂದು ಚಾಸಾ 1 ರವರು ನ್ಯಾಯಾಲಯದ ಮುಂದೆ ನೀಡಿದ ಹೇಳಿಕೆಯನ್ನು ಪಡೆದಿರುತ್ತೇನೆ. ಹೇಳಿಕೆಯನ್ನು ನಿಸಿ 1 ಎಂದು ಈಗಾಗಲೇ ಗುರುತಿಸಲಾಗಿದೆ.

ದಿಃ 28.10.2025 ರಂದು ಸಾಕ್ಷಿದಾರರಾದ ಚಾಸಾ 2 ರಿಂದ 5 ರವರ ಹೇಳಿಕೆಗಳನ್ನು ಮಾಡಿಕೊಂಡಿರುತ್ತೇನೆ. ಚಾಸಾ 3 ರವರು ನಿಪಿ 5 ರಂತೆ ಹೇಳಿಕೆ ಕೊಟ್ಟಿರುತ್ತಾರೆ. ಚಾಸಾ 5 ರವರು ನಿಪಿ 06 ರಂತೆ ಹೇಳಿಕೆ ಕೊಟ್ಟಿರುತ್ತಾರೆ. ಅದೇ ದಿನ ಚಾಸಾ 10 ರವರಿಗೆ ಚಾಸಾ 1 ರವರ ಮನೆಯ ದಾಖಲಾತಿ ನೀಡುವಂತೆ ಪತ್ರ ಬರೆದಿರುತ್ತೇನೆ.

ದಿಃ 29.10.2025 ರಂದು ಚಾಸಾ 1 ರವರ ಮನೆಯ ದಾಖಲಾತಿಯನ್ನು ಪಡೆದಿರುತ್ತೇನೆ. ದಾಖಲಾತಿಯನ್ನು ನಿಪಿ 09 ಈಗಾಗಲೇ ಗುರುತಿಸಲಾಗಿದೆ.

ದಿಃ 04.11.2025 ರಂದು ಚಾಸಾ 08 ರವರಿಂದ ವರದಿ ಪಡೆದಿರುತ್ತೇನೆ. ವರದಿಯನ್ನು ನಿಪಿ 07 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿ ಸಹಿಯನ್ನು ನಿಪಿ 07(ಎ) ಎಂದು ಗುರುತಿಸಲಾಯಿತು. ನಂತರ ತನಿಖೆ ಪೂರ್ಣಗೊಳಿಸಿ ಆರೋಪಿ ವಿರುದ್ಧ ದೊ.ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಚಾಸಾ 12 ರವರ ಭಾವಚಿತ್ರಗಳ ಸಂಬಂಧ ಭಾರತೀಯ ಸಾಕ್ಷಿ ಅಧಿನಿಯಮ ಕಲಂ 63(4)(ಸಿ) ರಂತೆ ದೃಢಿಕರಣವನ್ನು ನೀಡಿರುತ್ತಾರೆ. ದೃಢಿಕರಣವನ್ನು ನಿಪಿ 11 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿ ಸಹಿಯನ್ನು ನಿಪಿ 11(ಬಿ) ಎಂದು ಗುರುತಿಸಲಾಯಿತು. ಸಾಕ್ಷಿದಾರರ ಹೇಳಿಕೆಗಳಲ್ಲಿ 29.09.2025 ಕ್ಕೆ ಬದಲಾಗಿ 29.10.2025 ಎಂದು, ದಿಃ 28.09.2025 ಕ್ಕೆ ಬದಲಾಗಿ 28.11.2025 ಎಂದು ಬೆರಳಚ್ಚು ತಪ್ಪಿನಿಂದ ನಮೂದಾಗಿರುತ್ತದೆ.

**ಪಾಟೀ ಸವಾಲುಃ- ಶ್ರೀ  ಎಂ.ಎಸ್.ಕೆ  ವಕೀಲರಿಂದ**

ಆರೋಪಿ ಮತ್ತು ಚಾಸಾ 1 ರವರ ಮನೆಗಳ ಅಕ್ಕಪಕ್ಕ ಬೇರೆ ವಾಸದ ಮನೆಗಳು ಇರುತ್ತದೆ. ನಾನು ಸದರಿ ಮನೆಯ ನಿವಾಸಿಗಳನ್ನು ವಿಚಾರಣೆ ಮಾಡಿರುವುದಿಲ್ಲ. ನಾನ ಸಾಕ್ಷಿದಾರರ ಹೇಳಿಕೆಗಳನ್ನು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಕೃತ್ಯ ಸ್ಥಳಕ್ಕೆ ಹೋಗಿಲ್ಲ ಯಾವುದೇ ಮಹಜರ್ ಅನ್ನು ಬರೆದಿಲ್ಲ ನಿಪಿ 2 ಅನ್ನು ಠಾಣೆಯಲ್ಲಿ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲಾತಿಗಳಿಗೂ ಈ ಪ್ರರಕಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದೂರು ದಾಖಲು ಮಾಡಿ ಸುಳ್ಳು ದೊ.ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಮುದ್ದೆಮಾಲುಗಳಿಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಾಮರಾಜನಗರ, ಪೀಠಾಸೀನ ಕೊಳ್ಳೇಗಾಲ